ಅಂತ ವಿನಂತಿ ಮಾಡಿಕೊಳ್ಳುತ್ತೇವೆ. ಇನ್ನೊಂದು, ತಾತ್ಕಾಲಿಕವಾಗಿ ಅಲ್ಲಿಗೆ ಮರಳುಚೀಲ ಹಾಕಬೇಕು ಅಂತ ಸರ್ಕಾರ ಆದೇಶ ಮಾಡಿದೆ, ಕಲ್ಲುಗಳನ್ನು ಹಾಕಲಿಕ್ಕೆ ಆಗುವುದಿಲ್ಲ ಅಂತ. ಬೇರೆ ಕಡೆಗೆ ಅದು ಸಾಧ್ಯವಾಗಬಹುದು, ಆದರೆ ನಾನು ಹೇಳಿದಂತೆ ಪಡುಕೆರೆ ಎಂಬ ಭಾಗ ಆಚೆ ಬದಿಯಲ್ಲಿ ನದಿ ಈಚೆ ಬದಿಯಲ್ಲಿ ಸಮುದ್ರ ಇರುವ ಭಾಗದಲ್ಲಿ ಕಡಲುಕೊರೆತಕ್ಕೆ ಮರಳುಚೀಲ ಹಾಕಿದರೆ, ಈಗಾಗಲೇ ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆಯಡಿ ಆದಂತಹ ಕೊಂಕಣ ರಸ್ತೆ ಒಡೆದುಹೋಗಿದೆ. ಆದ್ದರಿಂದ ಮರಳುಚೀಲದ ಬದಲಿಗೆ ಕಲ್ಲನ್ನು ಹಾಕಲಿಕ್ಕೆ ಸರ್ಕಾರ ಅನುಮತಿ ಕೊಡಬೇಕೆಂದು ಅಲ್ಲಿ ಭಯಭೀತ ಜನರ ಭಾವನೆಯನ್ನು ಸಕಾರದ ಗಮನಕ್ಕೆ ತರಬಯಸುತ್ತೇನೆ. ಮತ್ತೆ ಶಾಶ್ವತವಾದ ಪರಿಹಾರ, ಸುನಾಮಿ ಬೇರೆ ಬೇರೆ ರೀತಿಯಿಂದ ಹಣ ತೆಗೆದುಕೊಂಡು ಕೇಂದ್ರ ಸರ್ಕಾರದಿಂದ ಹೋದಂತಹ ಯೋಜನೆಯನ್ನು ಮಂಜೂರು ಮಾಡಿಕೊಂಡು ನಮಗೆ ಪ್ರತಿ ಮಳೆಗಾಲಕ್ಕೆ ಬರುವ ಸಮಸ್ಯೆ ಮುಂದುವರೆಯದಂತಹ ರೀತಿಯಲ್ಲಿ ಶಾಶ್ವತ ತಡೆಗೋಡೆಯೊಂದನ್ನು ರಚನೆ ಮಾಡಬೇಕು ಮತ್ತು ತಾತ್ಕಾಲಿಕವಾಗಿ ಮೂರು ಕೋಡಿ ರಿಲೀಸ್ ಮಾಡಿ ಕಲ್ಲು ಹಾಕಿ ತಡೆಗೋಡೆ ರಚನೆ ಮಾಡಲು ಸರ್ಕಾರ ಅನುಮತಿ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು): ಅಧ್ಯಕ್ಷರೇ (ಹೇಳಿಕೆ ಓದುವರು ಲಗತ್ತಿಸಿದೆ)

ಶ್ರೀ ರಘುಪತಿ ಭಟ್: ಅಧ್ಯಕ್ಷರೇ ಆಚೆ ನದಿ ಈಚೆ ಸಮುದ್ರ ಇದೆ–ಇವೆರಡೂ ಒಂದಾದರೆ ಇಡೀ ಮೀನುಗಾರರಿಗೆ ತೊಂದರೆಯಾಗುತ್ತದೆ. ಅಂತಹ ತುಂಬಾ ಅಪಾಯಕಾರಿಯಾದ ಪ್ರದೇಶಕ್ಕಾದರೂ ಕಲ್ಲು ಹಾಕಲು ಸರ್ಕಾರ ಆದೇಶ ಮಾಡಬೇಕು. ಮತ್ತೊಂದು ಮುಖ್ಯಮಂತ್ರಿಗಳು ಮೂರು ಕೋಟಿಯನ್ನು ನಮ್ಮ ಜಿಲ್ಲೆಗೆ ಬಿಡುಗಡೆ ಮಾಡುತ್ತೇವೆ ಅಂತ ಮೊನ್ನೆ ಹೇಳಿದರು. ಅದನ್ನೂ ಮಾಡಬೇಕೆಂದು ವಿನಂತಿ ಕಲ್ಲು ಹಾಕಲಿಕ್ಕೆ ಅವಕಾಶ ಮಾಡಿಕೊಡಬೇಕು ಇಲ್ಲದಿದ್ದರೆ ಅಪಾಯವಿದೆ. ಪಡುಗೆರೆಯ ಭಾಗದಲ್ಲಿ.

ಉಪಾಧ್ಯಕ್ಷರು: ಈಗ ಒಂದು ಪ್ರಕಟಣೆ: ಶ್ರೀ ಕೆ. ಶ್ರೀನಿವಾಸಗೌಡ, ಕೃಷಿ ಸಚಿವರು ಈ ದಿನ ಮಧ್ಯಾಹ್ನ 1–30ಕ್ಕೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಏರ್ಪಡಿಸಿರುವ ಭೋಜನ ಕೂಟದಲ್ಲಿ ಭಾಗವಹಿಸಲು ತಮ್ಮನ್ನು ಆಹ್ವಾನಿಸಲಾಗಿದೆ. ತಾವು ಭಾಗವಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

(1 ಗಂಟೆ 55 ನಿಮಿಷಕ್ಕೆ ಮಧ್ಯಾಹ್ನ 3 ಗಂಟೆಗೆ ಸೇರಲು ಸಭೆಯ ಮುಂದೂಡಲ್ಪಟ್ಟಿತು)

ಕರಾವಳಿ ತೀರದ ಕಡಲ್ಕೊರೆತದ ಬಗ್ಗೆ ಶ್ರೀ ಕೆ. ರಘುಪತಿ ಭಟ್, ಶಾಸಕರು (ಉಡುಪಿ ಕ್ಷೇತ್ರ) ಇವರ ಶೂನ್ಯ ವೇಳೆಯ ಪ್ರಸ್ತಾಪಕ್ಕೆ ಉತ್ತರ